ಪಿಂಡಪ್ರದಾನ ಕಾರ್ಯವನ್ನು ಮಾಡುತ್ತಿದ್ದಾರೆ. ಆ ಸಮಯದಲ್ಲಿ ವೆಂಕಣ್ಣಯ್ಯನವರು, 'ಹಳ್ಳಿಯಿಂದ ಯಾರೋ ನಿಮ್ಮನ್ನು ನೋಡಲು ಬಂದಿದ್ದಾರೆ' ಎಂದು ದೊಡ್ಡಪ್ಪನವರಿಗೆ ತಿಳಿಸಿದರು. ತಕ್ಷಣವೇ ಅವರು ಪಕ್ಕದಲ್ಲಿದ್ದ ಉದ್ಧರಣೆಯನ್ನು ರೊಯ್ಯನೆ ಅವರತ್ತ ಎಸೆದರಂತೆ. ವೈದಿಕಕ್ಕೆಂದು ಮಡಿ ಉಟ್ಟಿರುವಾಗ ಸಂಸ್ಕೃತ ಇಲ್ಲವೆ ಮಾತೃಭಾಷೆ ತೆಲುಗನ್ನು ಬಳಸಬೇಕಂತೆ! ಕನ್ನಡವನ್ನು ಕಿವಿಯಿಂದ ಕೇಳುವುದು ಮೈಲಿಗೆ. 'ಇಂತಹ ದೊಡ್ಡಪ್ಪನನ್ನು ಈ ಇಳಿವಯಸ್ಸಿನಲ್ಲಿ ಸರಿಮಾಡಲು ಸಾಧ್ಯವೇನಯ್ಯಾ?' ಎಂದರು ವೆಂಕಣ್ಣಯ್ಯನವರು. ನಾನು ತೆಪ್ಪಗಾದೆ.

***

ಟಿ.ಎಸ್. ವೆಂಕಣ್ಣಯ್ಯನವರ ವ್ಯಕ್ತಿತ್ವವೇ ಹೀಗೆ, ಸೂಜಿಗಲ್ಲಿನಂತೆ ಕ್ಷಣಕಾಲ ಕಂಡವರನ್ನು ಅದು ಆಕರ್ಷಿಸಿ ಬಿಡುತ್ತಿತ್ತು. ಕಾರಣ ಒಂದೇ? ಎರಡೇ? ಒಬ್ಬೊಬ್ಬರಿಗೆ ಒಂದೊಂದು. ಒಟ್ಟಾರೆ ಅವರ ವ್ಯಕ್ತಿತ್ವದ ಪ್ರಭಾವಲಯಕ್ಕೆ ಬಂದು ತಪ್ಪಿಸಿಕೊಂಡವರಿಲ್ಲ. ಅವರ ವಜ್ರಸಮ ವ್ಯಕ್ತಿತ್ವ ತನ್ನ ಹಲವಾರು ಮುಖಗಳಲ್ಲಿ ಕಾಂತಿಯನ್ನು ಬೀರುತ್ತಿತ್ತು. ತನ್ನ ಅಪಾರ, ಸದ್ಗುಣ ಸಂಪನ್ನತೆಯಿಂದ ಅವರು ಪರಿಪೂರ್ಣ ವ್ಯಕ್ತಿಯಂತೆ ಭಾಸವಾಗುತ್ತಿದ್ದರು. ಪುರುಷೋತ್ತಮಸಮ ವ್ಯಕ್ತಿತ್ವದ ಅವರು ಮಗುವಿನಂತೆ ಸಹಜ ಮುಗ್ಧತೆಯಿಂದ ಜನರನ್ನು ಮರಳು ಮಾಡಿ ಬಿಡುತ್ತಿದ್ದರು. ಅವರ ಬರಹಕ್ಕಿಂತ ಬದುಕು ದೊಡ್ಡದಾಗಿತ್ತು. ಅವರ ನುಡಿಗಿಂತ ನಡೆ ಉನ್ನತವಾಗಿತ್ತು. ಅವರ ಬದುಕು ಬರಹ, ನಡೆ–ನುಡಿ ಪ್ರಪಂಚವೇ ಮೆಚ್ಚಿ ಅಹುದೆನ್ನುವಂತಿತ್ತು.

ವೆಂಕಣ್ಣಯ್ಯನವರ ನಂಬಿಕೆ, ಆಚಾರಗಳು ಎಂದೂ ಮೌಢ್ಯಾಚಾರವಾಗಿರಲಿಲ್ಲ. ಒಂದು ದಿನ ಭಿಕ್ಷಾನ್ನದ ಹುಡುಗನೊಬ್ಬನು ಬಂದು 'ಭವತಿ ಭಿಕ್ಷಾಂ ದೇಹಿ' ಎಂದು ಗಟ್ಟಿಯಗಿ ಕೂಗಿದ. ನಡುಮನೆಯಲ್ಲಿದ್ದ ವೆಂಕಣ್ಣಯ್ಯನವರ ಮಾತೋಶ್ರೀಯವರು 'ಮುಂದೆ ಹೋಗಿ ಬಾಪ್ಪ' ಎಂದರು. ಅದನ್ನು ಕೇಳುತ್ತಲೇ ವೆಂಕಣ್ಣಯ್ಯನವರು ಎದ್ದು ಹೋಗಿ ವಿದ್ಯಾರ್ಥಿಗೆ ಸ್ವಲ್ಪ ನಿಂತಿರುವಂತೆ ಹೇಳಿ ಒಳಗೆ ಹೋಗಿ ತಾಯಿಯವರನ್ನು ಕುರಿತು 'ಇನ್ನೂ ಅಡಿಗೆ ಆಗಿಲ್ಲವೆ? ಯಾಕಮ್ಮ ಅನ್ನ ಹಾಕಲಿಲ್ಲ?' ಎಂದು ಕೇಳಿದರು. ತಾಯಿಯವರು 'ಅಡಿಗೆ ಏನೋ ಆಗಿದೆ, ದೇವರ ಪೂಜೆ ಇನ್ನೂ ಆಗಿಲ್ಲ. ದೇವರಿಗೆ ನೈವೇದ್ಯವಾಗದೆ ಹೇಗಪ್ಪ ಹಾಕುವುದು?' ಅಂದರು. ವೆಂಕಣ್ಣಯ್ಯನವರು 'ವಿದ್ಯಾರ್ಥಿ ರೂಪದಿಂದ ಪ್ರತ್ಯಕ್ಷವಾಗಿ ಬಂದು ಕೇಳುತ್ತಿರುವ ದೇವರಿಗೆ ಅನ್ನವನ್ನು ಕೊಡದೆ ತಿನ್ನದ ದೇವರ ಮುಂದೆ ಇಡಬೇಕೆ ಅಮ್ಮಾ? ಶಬರಿ ಎಂಜಲು ಮಾಡಿ ಕೊಟ್ಟ ಹಣ್ಣುಹಂಪಲುಗಳನ್ನು ಶ್ರೀರಾಮ ಪ್ರೀತಿಯಿಂದ ತಿನ್ನಲಿಲ್ಲವೆ? ಭಿಕ್ಷಾನ್ನ ಹಾಕಿಬಿಡು. ವಿದ್ಯಾರ್ಥಿ ಇನ್ನೂ ನಿಂತಿದ್ದಾನೆ. ಅವನಿಗೆ ಹಾಕಿದ ಮೇಲೂ ದೇವರಿಗೆ ಆಗುತ್ತದೆ. ಮೀಸಲಳಿಯಿತೆಂದು ದೇವರಿಗೆ ನೈವೇದ್ಯ ಮಾಡಲು ನಿನ್ನ ಮನಸ್ಸು ಸುತರಾಂ ಒಪ್ಪದೇ ಇದ್ದರೆ ದೇವರಿಗೆ ಈ ದಿನ ಹಾಲು–ಹಣ್ಣುಗಳೇ ನೈವೇದ್ಯವಾಗಲಿ' ಎಂದು ಹೇಳಿ ತಮ್ಮ ಕೊಠಡಿಗೆ ಹಿಂದಿರುಗಿದರು. ನಮ್ಮಲ್ಲಿರುವ ಮೂಢನಂಬಿಕೆ, ಅವಿವೇಕದ ಆಚಾರ, ವ್ಯವಹಾರಗಳಿಗಾಗಿ ಅವರು ಪಶ್ಚಾತ್ತಾಪಪಡುತ್ತಿದ್ದರು.

***

ವೆಂಕಣ್ಣಯ್ಯನವರಿಗೆ ಭಗವದ್ಗೀತೆ ವಾಚೋವಿಧೇಯವಾಗಿತ್ತೆಂದು ಹಿಂದೆಯೇ ಹೇಳಿದೆ. ಅಲ್ಲಿನ ಉದಾತ್ತ ತತ್ವಗಳನ್ನು ಅವರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರು. ಅವರಲ್ಲಿದ್ದಂತಹ ಅನಾಸಕ್ತಿ ಸನ್ಯಾಸಿಯಲ್ಲಿಯೂ ಅಪೂರ್ಣ. ನಾನು ಪ್ರತ್ಯಕ್ಷವಾಗಿ ಕಂಡ ಒಂದು ಘಟನೆಯನ್ನು ನೆನೆದೊಡನೆ ನನ್ನ ಚೇತನ ಭಕ್ತಿಪುಲಕಿತವಾಗುತ್ತದೆ. 1931 ಇಸವಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಮೈಸೂರಿನಲ್ಲಿ ಅತ್ಯಂತ ವಿಜೃಂಭಣೆಯಿಂದ ನೆರವೇರಿದುದು ಈ ಹಿಂದೆಯೇ ಪ್ರಸ್ತಾಪಿತವಾಗಿದೆ. ಕನ್ನಡ ಪ್ರಾಧ್ಯಾಪಕರಾಗಿದ್ದ ವೆಂಕಣ್ಣಯ್ಯನವರು ಅದರಲ್ಲಿ ಪ್ರಮುಖ ಪಾತ್ರವನ್ನು ವಹಿಸಬೇಕಾದುದು ಸ್ವಾಭಾವಿಕವಾಗಿತ್ತು. ಆ ಸಮ್ಮೇಳನದ ಅಂಗವಾಗಿ ಗಮಕ ಕಲೆಯ ಪ್ರದರ್ಶನವನ್ನು ನಡೆಸಬೇಕೆಂದುಕೊಂಡು ಆ ಕಲೆಯಲ್ಲಿ ಪ್ರವೀಣರಾಗಿದ್ದ ಶ್ರೀಯುತರುಗಳಾದ ಬಿಂದೂರಾವ್, ಮಾಯಿಗೌಡ, ಕೃಷ್ಣರಾವ್, ಸಂಪತ್ತುಮಾರಾಚಾರ್ ಮೊದಲಾದವರನ್ನು ಒಂದು ದಿನ ಬೆಳಿಗ್ಗೆ ತಮ್ಮ ಮನೆಗೆ ಆಹ್ವಾನಿಸಿದರು. ಕಾಲೇಜು ರಸ್ತೆಯಲ್ಲಿದ್ದ ಅವರ ಮನೆಯ ಮಹಡಿ